**ದಿನಾಂಕಃ 27-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ ಎಸ್ ಡಿ ಡಿ ವಕೀಲರಿಂದಃ**

ನಿ.ಪಿ- 16 : ನನ್ನ ಮಗನ ಶಾಲಾ ದೃಢೀಕರಣ ಪ್ರಮಾಣ ಪತ್ರ

ನಿ.ಪಿ- 17 : ನನ್ನ ಮಗನ ಆಧಾರ ಕಾರ್ಡ್‌ನ ನೋಟರೈಜ್ಡ ಪ್ರತಿ, (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ)

ಎಂದು ಗುರುತಿಸಲಾಯಿತು.

ಅರ್ಜಿಯಲ್ಲಿ ಕೋರಿ ಕೊಂಡಂತೆ ಆದೇಶ ಆಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ.ಎಂ ಹೆಚ್ ಜಿ .ವಕೀಲರಿಂದಃ**

1. ನನ್ನ ಮಗನ ಶಾಲಾ ದಾಖಲಾತಿ ಹಾಗೂ ಆಧಾರ ಕಾರ್ಡ ಪ್ರತಿ ಹಾಜರು ಪಡಿಸಿರುತ್ತೇನೆ. ಅಂತ್ಯಸಂಸ್ಕಾರಕ್ಕೆ ಸುಮಾರು ರೂ.1 ಲಕ್ಷ ರೂಪಾಯಿ ಖರ್ಚು ಮಾಡಿದ್ದು, ಆ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಅಪಘಾತ ಕಾರ್ ಚಾಲಕನ ತಪ್ಪಿನಿಂದ ಆಗಿರದೇ ನನ್ನ ಮಗನ ತಪ್ಪಿನಿಂದಲೇ ಆಗಿದೆ ಎಂದರೆ ಸರಿಯಲ್ಲ. ನನ್ನ ಮಗ ಕೃಷಿ ಹಾಗೂ ಕಟ್ಟಡ ಕಾಮಗಾರಿ ಕೆಲಸ ಮಾಡುತ್ತಿದ್ದು ಅದರಿಂದ ತಿಂಗಳಿಗೆ ರೂ.45 ಸಾವಿರ ಆದಾಯ ಇತ್ತು ಎಂದು ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುತ್ತೇನೆ. ಅಪಘಾತ ಸಮಯದಲ್ಲಿ ಕೆ ಎ 31 ಎನ್ 6333 ಕಾರಿನ ವಿಮೆ ಚಾಲ್ತಿಯಲ್ಲಿತ್ತು ಎಂದರೆ ಸರಿ. ನನ್ನ ಮಗನಿಗೆ ಬೈಕ್ ಚಲಾಯಿಸಲು ಚಾಲನಾ ಪರವಾನಿಗೆ ಪತ್ರ ಇತ್ತು, ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನನ್ನ ಮಗನಿಗೆ ಮೋಟಾರ್ ಸೈಕಲ್ ಚಲಾಯಿಸಲು ಚಾಲನಾ ಪರವಾನಿಗೆ ಇರಲಿಲ್ಲ, ಇದ್ದಿದ್ದರೆ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತಿದ್ದೆ ಎಂದರೆ ಸರಿಯಲ್ಲ. ಬೈಕ್ ಗೆ ಇನ್ಸುರೆನ್ಸ ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಕಾರಿನ ಚಾಲಕನ ವಿರುದ್ಧ ಸುಳ್ಳು ದೂರು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಕಾರ್ ಚಾಲಕನಿಗೆ ಚಾಲನಾ ಪರವಾನಿಗೆ ಇತ್ತು. ಕಾರಿಗೆ ವಿಮೆ ಚಾಲ್ತಿಯಲ್ಲಿದ್ದುದ್ದರಿಂದ 2 ನೆ ಎದುರುದಾರರೇ ಪರಿಹಾರ ಕೊಡಬೇಕು ಎಂದರೆ ಸಾಕ್ಷಿ ಇಬ್ಬರೂ ಪರಿಹಾರ ಕೊಡಬೇಕು ಎಂದು ಹೇಳುತ್ತಾರೆ. 1 ನೇ ಎದುರುದಾರರು ಯಾವುದೆ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಕೇಸಿಗೆ ಅನುಕೂಲವಾಗಲಿ ಎಂದು ಸುಳ್ಳು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ</u>**

2 ನೆ ಎದುರುದಾರರ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಏನೂ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/–

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.